ಸಾಗರಕ್ಕೆ, ಶಿವಮೊಗ್ಗಕ್ಕೆ ಸ್ನೇಹಿತರ ಮನೆಗಳಿಗೆಂದು ಹೋಗಿ ಬರುತ್ತಿದ್ದ. ಉಳಿದ ಭಾನುವಾರಗಳನ್ನು ನನ್ನೊಡನೆ ಕಳೆಯುತ್ತಿದ್ದ.

ದಿವಾಕರನ ಹೆಣದ ಸಂಸ್ಕಾರವನ್ನು ನಾನೇ ಮಾಡಿದ್ದೆ. ಬ್ಯಾಂಕಿನವರು ಕೆಲವರು ಬಂದಿದ್ದರು. 'ಅವರು ನಿಮ್ಮ ಆತ್ಮೀಯ ಸ್ನೇಹಿತರು. ಆದ್ದರಿಂದಲೇ ನಿಮಗೆ ಪತ್ರ ಬರೆದಿಟ್ಟು ಸತ್ತಿದ್ದಾರೆ. ಇನ್ನೆಲ್ಲ ವ್ಯವಹಾರವೂ ನಿಮ್ಮದೆ' ಎಂದು ಹೇಳಿ ಆ ಬಗ್ಗೆ ಎಲ್ಲರೂ ನಿಷ್ಕ್ರಿಯರಾಗತೊಡಗಿದಾಗ, ನನಗೂ ಮತ್ತು ದಿವಾಕರನಿಗೆ ಹೆಚ್ಚು ಸಂಬಂಧ ಬೆಳೆಯತೊಡಗಿತು. ಬ್ಯಾಂಕಿನ ಮ್ಯಾನೇಜರ್ ನನ್ನನ್ನು ಕರೆಯಿಸಿ ಬ್ಯಾಂಕಿನಲ್ಲಿ ಅವನಿಟ್ಟಿದ್ದ ಎಂಟು ಸಾವಿರವನ್ನು ನನ್ನ ಖಾತೆಗೆ ಬದಲಾಯಿಸಿದ್ದರು.

ಅವನು ಸತ್ತು ಮೂರು ದಿನಗಳಾಗಿದ್ದವು. ಅಮ್ಮ ಬಹಳ ದುಃಖಿಸಿದ್ದರು. 'ಅದ್ಯಾಕೆ ಆ ಮನುಷ್ಯ ಆ ರೀತಿ ಮಾಡ್ಕಂಡ' ಎಂದು ತಮ್ಮ ಆಶ್ಚರ್ಯವನ್ನು ಇನ್ನೂ ಜೀವಂತವಾಗಿರಿಸಿಕೊಂಡಿದ್ದರು. 'ತುಂಬಾ ಒಳ್ಳೆಯ ಮನುಷ್ಯಾರೀ' ನನ್ನವಳು ಮೆಚ್ಚುಗೆಯೊಡನೆ ದುಃಖವನ್ನೂ ವ್ಯಕ್ತಪಡಿಸಿದ್ದಳು. ನಾನು ಅನ್ಯಮನಸ್ಕನಾಗಿದ್ದೆ. ಸಬ್ ಇನ್ಸ್‌ಪೆಕ್ಟರ್ ಬಂದರು. 'ಏನ್ಸಾರ್, ದಿವಾಕರ ಅವರು ನಿಮ್ಮ ಸ್ನೇಹಿತರೆ– ಆತ್ಮಹತ್ಯೆ ಮಾಡಿಕೊಂಡರಂತೆ, ನಮಗೆ ಒಂದು ಮಾತಾದರೂ ತಿಳಿಸಿದ್ದೀರಾ' ಎಂದವರನ್ನು ಮನೆಯೊಳಕ್ಕೆ ಆಹ್ವಾನಿಸಿ ವಿಸ್ಕಿಯನ್ನು ಕೊಟ್ಟು ತಲೆ ಬಿಸಿ ಮಾಡಿದ್ದೆ. 'ಅದೆಲ್ಲ ಯಾಕೆ ಫಜೀತಿ ಅಂತ ಮುಗಿಸ್ಬಿಟ್ಟೆ ಸಾರ್. ಕ್ಷಮಿಸಿ' ಎಂದೆ. ಅವರು ನಕ್ಕು 'ಪರವಾಗಿಲ್ಲ ಬಿಡಿ, ಮುಂದೆ ಪ್ರೊಸೀಡ್ ಮಾಡಿ' ಎಂದು ಹೇಳಿ ಹೊರಟು ಹೋಗಿದ್ದರು.

ದಿವಾಕರ ಸತ್ತ ನಂತರದ ಭಾನುವಾರ ಬೆಳಿಗ್ಗೆಯೇ ತಿಂಡಿ ತಿಂದು ದಿವಾಕರನ ಮನೆಯ ಬಾಗಿಲು ತೆರೆದೆ. ಅವನ ಬಗ್ಗೆ ಏನಾದರೂ ಮಾಹಿತಿಗಳು ದೊರೆಯಬಹುದೆಂಬ ಭರವಸೆ. ಬೀರು ಸೂಟ್‌ಕೇಟ್ ಎಲ್ಲಾ ಹುಡುಕಿದರೂ ನನ್ನ ಪ್ರಯತ್ನ ವಿಫಲವಾಯಿತು. ಬೀರುವಿನಲ್ಲಿ ಅವನ ಬಟ್ಟೆಗಳೊಂದೆ. ಒಂದಿಷ್ಟು ಸ್ಟೀಲ್ ಪಾತ್ರೆಗಳು. ಒಂದು ಹಳೆಯ ಕಿಟ್ ಬ್ಯಾಗ್ ಅದರಲ್ಲಿ ಕೆಲವು ಹಳೆಯ ಮಾಸ ಪತ್ರಿಕೆ, ವಾರ ಪತ್ರಿಕೆಗಳು, ಎಲ್ಲವನ್ನೂ ತೆಗೆದು ನೋಡಿದೆ. ಅವುಗಳಲ್ಲಿ ಒಂದು ಹಳೆಯ ಡೈರಿ. ಡೈರಿಯನ್ನು ತಿರುವಿ ಹಾಕಿದೆ. ಡೈರಿಯಲ್ಲಿ ಒಂದು ಸ್ಟ್ಯಾಂಪು ಹಚ್ಚಿದ ಪತ್ರ ಮನೆಯ ಅಧಿಕಾರದ ಪತ್ರ ಮನೆಯ ಅಧಿಕಾರವನ್ನು ತನ್ನ ಹೆಸರಿನಿಂದ 'ಕುಮುದ' ಎನ್ನುವ ಹೆಣ್ಣಿಗೆ ಬದಲಾಯಿಸಿತ್ತು! ಡೈರಿಯ ಒಂದು ಹಾಳೆಯಲ್ಲಿ ಒಂದು ಅಡ್ರೆಸ್ಸು; 'ಎಸ್.ಎಸ್. ನಾಡಕರ್ಣಿ, ಕೆನರಾ ಬ್ಯಾಂಕ್, ಮರ್ಮುಗೋವಾ' 'ಕುಮುದ' ಯಾರು? ನಾಡಕರ್ಣಿ ಯಾರು? ಬಗೆಹರಿಯದ ಪ್ರಶ್ನೆಗಳು. ಈ ದಿವಾಕರನ ಹಿಂದೆ ಅದೆಷ್ಟೋ ರಹಸ್ಯಗಳು ಇರುವಂತೆ ಭಾಸವಾಯಿತು.

ಒಂದು ಕೈ ನೋಡೋಣವೆಂದು ದಿವಾಕರನ ಸಾವನ್ನು ಕುರಿತು ನಾಡಕರ್ಣಿ ಎನ್ನುವವರಿಗೆ ಒಂದು ಪತ್ರವನ್ನು ಬರೆದೆ. ಅದಕ್ಕೆ ಉತ್ತರ ಬರಬಹುದೆಂದು ಕಾಯತೊಡಗಿದೆ. ಆ ಮುಖಾಂತರ ದಿವಾಕರನ ರಹಸ್ಯಗಳನ್ನು ಬಯಲಿಗೆಳೆಯಬೇಕೆಂಬ ಬಯಕೆ. ಇಪ್ಪತ್ತು ದಿನವಾದರೂ ನನ್ನ ಪತ್ರಕ್ಕೆ ಉತ್ತರ ಬರಲಿಲ್ಲ. ಬಹುಶಃ ನನ್ನ ಪತ್ರ ಸರಿಯಾದ ವ್ಯಕ್ತಿಗೆ ಸೇರಿತೋ ಇಲ್ಲವೋ ಎಂಬ ಅನುಮಾನ.

ಒಂದು ಭಾನುವಾರ, ಮಧ್ಯಾಹ್ನ ನಿದ್ರಿಸುತ್ತಿದ್ದೆ. ನನ್ನವಳು ಬಂದು ಯಾರೋ ಬಂದಿರುವರೆಂದು ಎಬ್ಬಿಸಿದಳು. ಬೆಳ್ಳನೆಯ ತೆಳ್ಳನೆಯ ಸುಮಾರು ದಿವಾಕರನ ವಯಸ್ಸಿನವರೇ, ಹೊರಗೆ ನಿಂತಿದ್ದವರನ್ನು ಒಳಕ್ಕೆ ಆಹ್ವಾನಿಸಿದೆ.